1 ಕರ್ನಾಟಕದಲ್ಲಿ ಟಾಸ್ಕ್ ಫೋರ್ಸ್ ಅನ್ನು ಬೆಂಗಳೂರು ನಗರದಲ್ಲಿನ ವಾಯುಮಾಲಿನ್ಯವನ್ನು ನಿಯಂತ್ರಿಸಲು ರಚಿಸಲಾಗಿದೆ

2 ವಾಯು ಗುಣಮಟ್ಟವನ್ನು ಸುಧಾರಿಸಲು 6 ಎಲ್ ಪಿ ಜಿ ವಿತರಣೆ ಕೇಂದ್ರ ಸ್ಥಾಪಿಸಲಾಗಿದೆ, 5% ಎಥನಾಲ್ ಬ್ಲೆಂಡೆಡ್ ಅನಿಲವನ್ನು ಸರಬರಾಜು ಗೊಳಿಸಲಾಗುತ್ತಿದೆ ಮತ್ತು ಅನಿಲ ಕಲಬೆರಕೆಯನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಲಾಗಿದೆ

3 ಜೈವಿಕ ವೈದ್ಯಕೀಯ ವ್ಯರ್ಥಪದಾರ್ಥಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿಮಾಡಲು ಬೆಂಗಳೂರು ಹತ್ತಿರ ಖಾಸಗಿ ಕ್ಷೇತ್ರದ 2 ಸೌಕರ್ಯಗಳು ಸ್ಥಾಪನೆಗೊಂಡಿದೆ

4 ಒಂದು ಹೊಸ ಸೌಕರ್ಯವನ್ನು ಅಪಾಯಕಾರಿ ವ್ಯರ್ಥಪದಾರ್ಥಗಳನ್ನು ವೈಜ್ಞಾನಿಕವಾಗಿ ಶುದ್ದೀಕರಿಸಲು ಮತ್ತು ವಿಲೇವಾರಿ ಮಾಡಲು ಬೆಂಗಳೂರು ಹತ್ತಿರ ಸ್ಥಾಪಿಸಲು ಉದ್ದೇಶಿಸಲಾಗಿದೆ

5 ಬೆಂಗಳೂರಿನ ಕೆರೆಗಳನ್ನು ಪುನರ್ ಸ್ಥಾಪನೆ ಮತ್ತು ಸಂರಕ್ಷಿಸಲು ಕೆರೆ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲಾಗಿದೆ ಇದರಿಂದ ಅಂತರ್ಜಲ ಮಟ್ಟ ಅಭಿವೃದ್ಧಿಯಾಗಲು ಸಹಕಾರಿಯಾಗಲಿದೆ

6 ವಾಯು ಮತ್ತು ಜಲಕಾಯ್ದೆ ಅಡಿಯಲ್ಲಿನ ಸಮ್ಮತಿ ಪತ್ರದಲ್ಲಿನ ಅವಕಾಶಗಳನ್ನು ಉಲ್ಲಂಘಿಸುವ ಉದ್ದಿಮೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ

7 ಮುನಿಸಿಪಲ್ ಘನ ವ್ಯರ್ಥ ಪದಾರ್ಥಗಳನ್ನು ವಿಲೇವಾರಿಮಾಡಲು ಬೆಂಗಳೂರು ಮಹಾನಗರ ಪಾಲಿಕೆ 2 ಲ್ಯಾಂಡ್ ಫಿಲ್ ಸೈಟ್ ಗಳನ್ನು ಸ್ಥಾಪಿಸಲು ಕ್ರಮ ಜರುಗಿಸುತ್ತಿದೆ

8 ಮಳೆ ನೀರನ್ನು ಬಳಕೆ ಮಾಡಲು ಆಯ್ದ ಸ್ಥಳಗಳಲ್ಲಿ ಮಾರ್ಗದರ್ಶಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ

ಪರಿಸರ (ಸಂರಕ್ಷಣೆ) ಕಾಯ್ದೆ 1986 ರ ಸೆಕ್ಷನ್ 5 ರ ಅಡಿಯಲ್ಲಿ ಬೆಂಗಳೂರು ನಗರದ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ನಲ್ಲಿ ಬಳಕೆಮಾಡಿ ಎಸೆಯಲಾಗುವ ವಸ್ತುಗಳಾದ ಪಾಲಿಥೀನ್ ಚೀಲ ಪ್ಲೇಟ್, ಲೋಟ/ಟಿಂಬ್ಲರ್ಸ್, ಚಮಚ ಫೋರ್ಕ್ಸ್ ಸ್ಟ ಮುಂತಾದವುಗಳನ್ನು ಸಾರ್ವಜನಿಕರು/ ಸಂದರ್ಶಿಕರು ಬಳಕೆಮಾಡುವುದನ್ನು ಮತ್ತು ಪರಿಸರ ಸ್ನೇಹಿ ಮತ್ತು ಜೈವಿಕವಾಗಿ ಕೊಳೆಯುವ ಪರ್ಯಾಯ ವಸ್ತುಗಳಾದ ಕೈಯಿಂದ ಮಾಡಲಾದ ಪೇಪರ್, ಅದುಮಿರುವ ಎಲೆ ಕಟ್ಟಿಗೆ, ಗೋಣಿನಾರು ಮತ್ತು ಹತ್ತಿಯನ್ನು ಪ್ಲಾಸ್ಟಿಕ್ ವಸ್ತುಗಳಿಗೆ ಬದಲಿಯಾಗಿ ಬಳಕೆ ಮಾಡಲು ಪ್ರೇರೇಪಿಸುವಂತೆ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ

ರಾಜ್ಯದಲ್ಲಿರುವ ವಾಯುಮಾಲಿನ್ಯ ಉಂಟು ಮಾಡುವ ಕಾರ್ಖಾನೆಗಳು

193 (515) ಶ್ರೀ ಸುಬ್ಬಾರೆಡ್ಡಿ ಕೆ ಎನ್ (ಬಸವನಗುಡಿ) ಮಾನ್ಯ ವೈದ್ಯಕೀಯ ಶಿಕ್ಷಣ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಾಯುಮಾಲಿನ್ಯ ದೂರು ದಾಖಲಾದ ಕಾರ್ಖಾನೆಗಳೆಷ್ಟು (ಕಳೆದ ಮೂರು ವರ್ಷದ ವಿವರ ನೀಡುವುದು)

ಆ) ಇಂತಹ ಕಾರ್ಖಾನೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಎ.ಬಿ ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ ವಾಯುಮಾಲಿನ್ಯ ಕುರಿತಂತೆ 216 ಕಾರ್ಖಾನೆಗಳ ವಿರುದ್ಧ ದೂರು ದಾಖಲಾಗಿರುತ್ತದೆ, ವರ್ಷವಾರು ವಿವರ ಈ ಕೆಳಗಿನಂತೆ ಇರುತ್ತದೆ

2001 ವರ್ಷ – 50

2002 ವರ್ಷ – 75

2003 ವರ್ಷ – 91

ಒಟ್ಟು – 216

ಆ) ಮಂಡಳಿಯು ಇಂತಹ ಕಾರ್ಖಾನೆಗಳ ವಿರುದ್ಧ ಜರುಗಿಸಿದ ಕ್ರಮ ಈ ಕೆಳಕಂಡಂತೆ ಇದೆ

ತೆಗೆದುಕೊಂಡ ಕ್ರಮಗಳು	2001	2002	2003
ಕಾರಣ ಕೇಳುವ ನೋಟೀಸ್	43	52	78
ನಿರ್ದೇಶನಗಳು	1	3	5
ಮುಚ್ಚುವ ಆದೇಶಗಳು	5	18	7
ಕ್ರಿಮಿನಲ್ ಮೊಕದ್ದಮೆಗಳು	1	2	1
ಮೇಲಿನ ಕ್ರಮ ಆಧಾರದ ಮೇಲೆ ಮಾಲಿನ್ಯ ಕ್ರಮಗಳನ್ನು ಅನುಸರಣೆ ಮಾಡಿದ ಉದ್ದಿಮೆಗಳು	35	37	52

ರಾಜ್ಯದಲ್ಲಿ ಜನಮೆಚ್ಚಿದ ಶಿಕ್ಷಕ ಪ್ರಶಸ್ತಿ ಕುರಿತು

196 (531) ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜನಮೆಚ್ಚಿದ ಶಿಕ್ಷಕ ಪ್ರಶಸ್ತಿಯನ್ನು ರಾಜ್ಯದಲ್ಲಿ ಎಂದಿನಿಂದ ಜಾರಿಗೆ ತರಲಾಗಿದೆ

ಆ) ಈ ಪ್ರಶಸ್ತಿಗೆ ಶಿಕ್ಷಕರುಗಳನ್ನು ಆಯ್ಕೆ ಮಾಡಲು ಅನುಸರಿಸಿರುವ ಮಾನದಂಡಗಳೇನು

ಇ) ಈ ಪ್ರಶಸ್ತಿಗೆ ನಡೆದಿರುವ ಆಯ್ಕೆಯಲ್ಲಿ ನ್ಯೂನತೆಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಸರ್ಕಾರ ಈ ಕುರಿತು ಏನಾದರೂ ಬದಲಾವಣೆಯನ್ನು ಯೋಜಿಸಿದೆಯೇ?

ಪ್ರೊ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2001–03ನೇ ಸಾಲಿನಿಂದ ಜಾರಿಗೆ ತರಲಾಗಿದೆ

ಆ) ಪ್ರಶಸ್ತಿಗೆ ಶಿಕ್ಷಕರನ್ನು ಆಯ್ಕೆ ಮಾಡಲು ತಾಲ್ಲೂಕು ಮಟ್ಟದ ಸಮಿತಿ ಎಸ್ ಡಿ ಎಂ ಸಿ ಯಿಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಯ್ಕೆ ಮಾಡುತ್ತದೆ

1 ಶಿಕ್ಷಕರು ಮಾನ್ಯತೆ ಪಡೆದ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು

2 ಕನಿಷ್ಠ 5 ವರ್ಷಗಳ ಉತ್ತಮ ಸೇವೆ ಸಲ್ಲಿಸಿರಬೇಕು